"ಹೌದು... ಅದನ್ನು ಬೂದಿ ಮುಚ್ಚಿದ ಕೆಂಡ ಎಂದು ಹೇಳುವೆ" ಎಂದರು ಭೈರಾಗಿ. "ಇಲ್ಲಿ ಏಳಬೇಕಾಗಿರುವುದು ಬೆಂಕಿ... ಈ ದೇಶ ಒಂದು ಯಜ್ಞಕುಂಡವಾಗಿ ಹೊತ್ತಿ ಉರಿಯಬೇಕು... ಇಲ್ಲಿರುವ ಅಧಮ ಗುಣಗಳೆಲ್ಲವನ್ನೂ ತಿಂದು ಜ್ವಾಲೆಗಳು ಏಳಬೇಕು" ಚಟ್ಟೆಂದು ಅವರು ಕೈಗಳನ್ನು ಎತ್ತಿದರು.

"ಅಗ್ನಿಯೇ ಎದ್ದೇಳು! ನಿನ್ನ ಬೆಳಕಿನಲ್ಲೇ ಬೆಳಗುತ್ತೀ! ಕೆಂಗುದುರೆಯಂತೆ ಹಾಯುತ್ತೀ! ಎಲ್ಲೆಲ್ಲೂ ಹಾಡಲ್ಪಡುತ್ತೀ! ನಿನ್ನನ್ನು ತಲುಪುವ ಎಲ್ಲವೂ ನೀನಾಗಿಯೇ ಆಗುತ್ತವೆ! ನಿನ್ನನ್ನು ಅಳಿಸಬೇಕೆಂದು ಕೊಂಡವರನ್ನು ತಿಂದೇ ನೀನು ಮದಹಿಡಿದು ಕುಣಿಯುತ್ತೀ! ಅಗ್ನಿಯೇ ನೀನು ಮಹತ್ತಾದವನು!"

ವೇದಘೋಷಗಳು ಮುಗಿದ ಮೇಲೆ ದುರುಗುಟ್ಟಿ ಬಾಪೂವನ್ನು ನೋಡಿದರು. "ಋಷಿ ವಸುಕೃತ... ಏಳು ಸಾವಿರಾವರ್ಷಗಳ ಹಿಂದೆ ಹಾಡಿದ್ದು... ನಮ್ಮ ಪಿತಾಮಹಾ, ನಮಗೆಲ್ಲ ಗುರು... ಅಗ್ನಿಯಲ್ಲಿ ನಮಗೆ ಮೊದಲೇ ಉರಿದವನು."

ಮುಂದಿನ ಮಾತಿಲ್ಲದೆ ಭೈರಾಗಿ ಹೊರಗೆ ಹೋದರು. ಬಾಪೂ ನೋಡುತ್ತಲೇ ಇದ್ದರು. ನಂತರ ಕಣ್ಣುಗಳನ್ನು ಮುಚ್ಚಿಕೊಂಡರು.

ಪೂಲ್ಚಂದ್ರ ಸ್ವಲ್ಪ ಹಿಂಜರಿದು ಭೈರಾಗಿಯನ್ನು ಹಿಂಬಾಲಿಸಿ ಹೋದರು.

ಭೈರಾಗಿ ನೇರವಾಗಿ ಹೋಗಿ ಒಂದು ಮರದಡಿಯಲ್ಲಿ ಕುಳಿತುಕೊಂಡರು.

"ಮಹಾರಾಜ್ ನಿಮ್ಮ ಆಹಾರ ಮತ್ತು..."

"ಸೂರ್ಯ ಉದಯವಾಗುವಾಗ ನಾನು ಎದ್ದು ಹರಿವ ನೀರಿನಲ್ಲಿ ಮೀಯುವೆ... ಆಗ ನನಗೆ ಬೇಕಾದ ಆಹಾರವನ್ನು ನಾನೇ ಹುಡುಕಿಕೊಳ್ಳುವೆ."

"ಸಬರಮತಿ ಹತ್ತಿರದಲ್ಲೇ ಹರಿಯುತ್ತಿದೆ."

"ಹೌದು... ಅಲ್ಲಿ ಸಣ್ಣ ಪ್ರಾಣಿಗಳೂ ಉಂಟು."

ಪೂಲ್ಚಂದ್ರ ಗಾಬರಿಯಾದರು.

ಭೈರಾಗಿ ಕಣ್ಣುಗಳನ್ನು ಮುಚ್ಚಿಕೊಂಡರು. ಅದರ ನಂತರವೂ ಪೂಲ್ಚಂದ್ರ ನಿಂತಿದ್ದರು. ನಂತರ ಮೆಲ್ಲಗೆ ಹಿಂತಿರುಗಿ ನಡೆದರು. ಇಂದು ರಾತ್ರಿ ನನ್ನಿಂದ ನಿದ್ದೆ ಮಾಡಲು ಸಾಧ್ಯವಿಲ್ಲ ಎಂದು ಹೇಳಿಕೊಂಡರು. ಏನು ನಡೆಯಿತೆಂದು ಯಾರ ಬಳಿಯಾದರೂ ಹೇಳಬೇಕೇ? ಆದರೆ ಎಲ್ಲವೂ ಒಂದು ಹುಚ್ಚುತನವಾದ ನಾಟಕದಂತೆಯೇ ಕಾಣುತ್ತದೆ.

ತನ್ನ ಕುಟೀರದೊಳಗೆ ಮಲಗಿ ಕಣ್ಣುಗಳನ್ನು ಮುಚ್ಚಿಕೊಂಡರು ಪೂಲ್ಚಂದ್ರ. ಕಣ್ಣೊಳಗೆ ಓಡುತ್ತಿದ್ದ ಬೆಳಕನ್ನು ಗಮನಿಸಿದರು. ಬೆಂಕಿಯನ್ನು ನೋಡುವಂತೆಯೇ ಇತ್ತು. ದೇಹದೊಳಗೆ ಬೆಂಕಿ ಉರಿಯುತ್ತಿದೆಯೇ ಏನು? ಚಿತೆಯಲ್ಲಿ ಉರಿಯುವಾಗ ಹೊರಗಿರುವ ಬೆಂಕಿಯೊಂದಿಗೆ ಒಳಗಿರುವ ಅಗ್ನಿ ಸೇರಿಕೊಳ್ಳುತ್ತದೆಯೇ? ಎಂತಹ ಹುಚ್ಚುತನದ ಆಲೋಚನೆಗಳು. ಹುಚ್ಚು ಆಲೋಚನೆಗಳು ಒಂದು ಪರಕೀಯ ಜೇನು ಹುಳದಂತೆ ಮೆದುಳಿನ ಜೇನುಗೂಡನ್ನು ಕೆಡವಿಬಿಡುತ್ತವೆ.

ಬೆಳಗಿನ ಜಾವ ಪೂಲ್ಚಂದ್ರ ಎಚ್ಚರಗೊಂಡರು. ಒಳ್ಳೆಯದಾಯಿತು ಇನ್ನೂ ಬೆಳಕಾಗಿರಲಿಲ್ಲ. ಆತುರದಿಂದ ಎದ್ದು ಅಂಗವಸ್ತ್ರವನ್ನು ತಲೆಮೇಲೆ ಹಾಕಿಕೊಂಡು ಹಿಂಬದಿಗೆ ಓಡಿದರು. ಅಡುಗೆ ಮನೆಗೆ ಬಾ ಬಂದಿದ್ದರು. ಮಿಂದು ಉಡುಗೆ ಬದಲಾಯಿಸಿದ್ದರು. ಕೂದಲಿನ ತುದಿಯ ನೀರು ಹನಿದು ಬಿಳಿಯ ಸೀರೆಯಮೇಲೆ ಅಂಟಿತ್ತು. ಅಡುಗೆಯನ್ನು ಮಾಡಲು ಚೋಟೂ ಶ್ಯಾಮಲಾನೂ ಬಂದಿದ್ದರು. ಗಂಟೆ ಎಷ್ಟು?

ಗಂಟೆ ನಾಲ್ಕುವರೆ. ಬಾ ಎಂದಿನಿಂದಲೂ ಐದು ಗಂಟೆಗೆ ಎಚ್ಚರಗೊಳ್ಳುವುದು ವಾಡಿಕೆ. ಒಲೆಯ ಮೇಲೆ ದೊಡ್ಡ ಕಡಾಯಿ ಇಡಲ್ಪಟ್ಟಿತ್ತು. ಚೋಟು ಒಲೆಯೊಳಗೆ ಎಣ್ಣೆಯಲ್ಲಿ ನೆನೆಸಿದ ಬಟ್ಟೆಯ